ಕ್ರ.ಸಂ/ಕೊ/25/2009–10

ಪುರಸಭಾ ಕಾರ್ಯಾಲಯ, ಪುತ್ತೂರು
ದಿನಾಂಕ : 23/06/2009

# ಟೆಂಡರು ಪ್ರಕಟಣೆ

ಪುತ್ತೂರು ಪುರಸಭಾ ವ್ಯಾಪ್ತಿಯಲ್ಲಿ 2009–10 ನೇ ಸಾಲಿನಲ್ಲಿ ದಾರಿದೀಪ ನಿರ್ವಹಣೆ ಮತ್ತು ವಿಸ್ತರಣೆ ಹಾಗೂ ದಾರಿದೀಪ ಕಂಬಕ್ಕೆ ನಂಬ್ರ ಬರೆಯುವ ಕೆಲಸಕ್ಕೆ ಟೆಂಡರು ಶೆಡ್ಯೂಲ್‌ನಲ್ಲಿ ವಿವರಿಸಿರುವ ಅಂಶಗಳಂತೆ ಕೊಟೇಶನ್ ಆಹ್ವಾನಿಸಲಾಗಿದೆ. ಟೆಂಡರ್‌ದಾರರ ಅರ್ಹತೆ ಕಾಲಂನಲ್ಲಿ ನಮೂದಿಸಿರುವಂತೆ ಅರ್ಹತೆಯಲ್ಲಿ ಆಸಕ್ತ ಕೊಟೇಶನ್‌ದಾರರು ನಿಗದಿತ ದಿನಗಳೊಳಗೆ ಟೆಂಡರ್‌ಗಳನ್ನು ದ್ವಿಪ್ರತಿಯಲ್ಲಿ ಮುಖ್ಯಾಧಿಕಾರಿ, ಪುರಸಭೆ ಪುತ್ತೂರು ಇವರಿಗೆ ಸಲ್ಲಿಸಬಹುದಾಗಿದೆ.

ಖಾಲಿ ಟೆಂಡರ್ ಫಾರಂ ಪಡೆಯಲು ಅರ್ಜಿಗಳನ್ನು ಸಲ್ಲಿಸುವುದು ಹಾಗೂ ಟೆಂಡರ್ ಫಾರಂ ಪಡೆಯಲು ದಿನಾಂಕ: 01/07/09 ರಿಂದ 13/07/09 ರ ವರೆಗೆ ಕೆಲಸದ ಎಲ್ಲಾ ದಿನಗಳಂದು ಕಛೇರಿ ವೇಳೆಯಲ್ಲಿ ಸ್ವೀಕರಿಸಲಾಗುವುದು. ಭರ್ತಿ ಮಾಡಿದ ಟೆಂಡರ್‌ಗಳನ್ನು 14/07/2009 ರಂದು ಸಂಜೆ 4.00 ಗಂಟೆಯ ಒಳಗೆ ಟೆಂಡರ್ ಬಾಕ್ಸ್‌ನಲ್ಲಿ ಮುಖ್ಯಾಧಿಕಾರಿಗಳ ಸಮಕ್ಷಮ ಹಾಕುವುದು. ಸಾಧ್ಯವಾದರೆ ಅದೇ ದಿನ 4.30 ಕ್ಕೆ ಹಾಜರಿದ್ದ ಕೊಟೇಶನ್‌ದಾರರ ಸಮಕ್ಷಮದಲ್ಲಿ ಟೆಂಡರ್‌ನ್ನು ಪುರಸಭಾ ಕಛೇರಿಯಲ್ಲಿ ತೆರೆಯಲಾಗುವುದು.

| ಕ್ರ.ಸಂ. | ಕಾಮಗಾರಿಯ ಹೆಸರು | ಇ.ಎಂ.ಡಿ. | ಟೆಂಡರ್ ಫಾರಂ | ಟೆಂಡರ್‌ದಾರರ ಅರ್ಹತೆ |
|---|---|---|---|---|
| 1. | ಪುತ್ತೂರು ಪುರಸಭಾ ವ್ಯಾಪ್ತಿಯೊಳಗೆ ಉರಿಯದ ದಾರಿದೀಪಗಳನ್ನು ಗೊತ್ತುಪಡಿಸಿ ಕಂಬದಿಂದ ತೆಗೆದು ಪುರಸಭಾ ಕಛೇರಿಗೆ ತಂದು ಕಿರಿಯ ಅಭಿಯಂತರರ ಸಮಕ್ಷಮ ಪರಿಶೀಲಿಸಿ ಅಗತ್ಯವಿರುವ ಸಾಮಾಗ್ರಿಗಳನ್ನು ಪೂರೈಸಿ, ಅಳವಡಿಸಿ ರಿಪೇರಿಗೊಳಿಸಿದ ನಂತರ ಕಂಬಕ್ಕೆ ಮರುಜೋಡಿಸುವ ಕೆಲಸ. (ಎಲ್ಲಾ ಸಾಮಾಗ್ರಿ ದರ ಸೇರಿ)<br>1) 40 ವ್ಯಾಟ್ಸ್ ಟ್ಯೂಬ್ ಸೆಟ್‌ಗಳು.<br>2) 70 ವ್ಯಾಟ್ಸ್ ಸೋಡಿಯಂ ಸೆಟ್‌ಗಳು.<br>3) 150 ವ್ಯಾಟ್ಸ್ ಸೋಡಿಯಂ ಸೆಟ್‌ಗಳು.<br>4) 250 ವ್ಯಾಟ್ಸ್ ಸೋಡಿಯಂ ಸೆಟ್‌ಗಳು.<br>5) ಹೈಮಾಸ್ಟ್ ದಾರಿದೀಪ 400 ವ್ಯಾಟ್ಸ್ ಸೆಟ್ 1 ರ | ಟೆಂಡರ್ ಮೊತ್ತದ ಶೇ.2.5 ನ್ನು ಇ.ಎಂ.ಡಿ ಮೊತ್ತವೆಂದು ಟೆಂಡರ್‌ನೊಂದಿಗೆ ಡಿ.ಡಿ,ರೂಪದಲ್ಲಿ ಲಗ್ತೀಕರಿಸುವುದು. | ಬೆಲೆ 500.00 | ಮೆಸ್ಕಾಂ ನೋಂದಾಯಿತ ವಿದ್ಯುತ್ ಗುತ್ತಿಗೆದಾರರು ದರ್ಜೆ 2. |
| 2. | ಕಛೇರಿ ಆದೇಶದಂತೆ ದಾದಿದೀಪ ದಾಸ್ತಾನಿನಿಂದ ನೀಡಲಾದ ಹೊಸ ದಾರಿದೀಪವನ್ನು ಕಛೇರಿ ಗೊತ್ತುಪಡಿಸಿದ ಹೊಸ ಕಂಬಕ್ಕೆ ಅಳವಡಿಸುವ ಕೆಲಸ. (ಟ್ಯೂಬ್‌ಸೆಟ್, ಸೋಡಿಯಂ | | | |

| | | | | |
|---|---|---|---|---|
| | ಸೆಟ್ ಮತ್ತು ಇತರ ಎಲ್ಲಾ ಬಿಡಿಭಾಗಗಳನ್ನು ಕಛೇರಿ ದಾಸ್ತಾನಿನಿಂದ ನೀಡಲಾಗುವುದು.) ಕಂಬಕ್ಕೆ ಅಳವಡಿಸುವ ದರವನ್ನು ಮಾತ್ರ ಸೂಚಿಸುವುದು.<br>1) ಟ್ಯೂಬ್ ಸೆಟ್ ಅಳವಡಿಸುವುದು 40 ವ್ಯಾಟ್ಸ್<br>2) 70 ವ್ಯಾಟ್ಸ್ ಸೋಡಿಯಂ ಸೆಟ್‌ಗಳು.<br>3) 150 ವ್ಯಾಟ್ಸ್ ಸೋಡಿಯಂ ಸೆಟ್‌ಗಳು.<br>4) 250 ವ್ಯಾಟ್ಸ್ ಸೋಡಿಯಂ ಸೆಟ್‌ಗಳು.<br>5) ಹೈಮಾಸ್ಟ್ ದಾರಿದೀಪ 400 ವ್ಯಾಟ್ಸ್ ಸೆಟ್ 1 ರ | | | |
| 3. | 1) ಪುತ್ತೂರು ಪುರಸಭಾ ಕಛೇರಿಯ ಆವರಣದ ಒಳಗಿರುವ ಮತ್ತು ಕಟ್ಟಡದ ಒಳಗಿರುವ ಟ್ಯೂಬ್‌ಲೈಟ್ ರಿಪೇರಿ<br>2) ಪುತ್ತೂರು ಪುರಸಭಾ ಕಛೇರಿಗೆ ಸಂಬಂಧಿಸಿದ ಎಲ್ಲಾ ವಾಣಿಜ್ಯ ಸಂಕೀರ್ಣಗಳ ಆವರಣದೊಳಗಿರುವ ಮತ್ತು ಕಟ್ಟಡದೊಳಗಿರುವ ಟ್ಯೂಬ್‌ಲೈಟ್ ಇತ್ಯಾದಿ ದೀಪಗಳನ್ನು ರಿಪೇರಿಗೊಳಿಸಿ ಮರು ಅಳವಡಿಸುವ ಕೆಲಸ.<br>3) ಮೇಲಿನ ರೇಚಕ ಸ್ಥಾವರ ಮತ್ತು ಕೆಳಗಿನ ರೇಚಕ ಸ್ಥಾವರ ಹಾಗೂ ಎಲ್ಲಾ ಪಂಪ್ ಹೌಸ್ ಮತ್ತು ನೀರಿನ ಟಾಂಕಿ ಇರುವ ನಿವೇಶನದ ಆವರಣದೊಳಗಿರುವ ಮತ್ತು ಕಟ್ಟಡದೊಳಗಿರುವ ಟ್ಯೂಬ್‌ಲೈಟ್ ಇತ್ಯಾದಿ ದೀಪಗಳನ್ನು ರಿಪೇರಿಗೊಳಿಸಿ ಮರು ಅಳವಡಿಸುವ ಕೆಲಸ ಹಾಗೂ ಮುಖ್ಯಾಧಿಕಾರಿಯವರು ಸೂಚಿಸಿದ ಇತರ ಕೆಲಸ ನಿರ್ವಹಿಸುವುದು. | | | |

**ಶರತ್ತುಗಳು:–**

1) ಟೆಂಡರ್‌ನಲ್ಲಿ ಭಾಗವಹಿಸುವವರು ಸೂಚಿಸಿದ ಭದ್ರತಾ ಠೇವಣಿಯನ್ನು ಪುರಸಭಾ ಕಛೇರಿಯಲ್ಲಿ ನಗದು ರೂಪದಲ್ಲಿ ಸಲ್ಲಿಸಿ ರಶೀದಿಯನ್ನು ಟೆಂಡರ್ ನಮೂನೆಯೊಂದಿಗೆ ಲಗ್ತೀಕರಿಸುವುದು.
2) ಟೆಂಡರ್‌ದಾರರು ಮೆಸ್ಕಾಂ ನೋಂದಾಯಿತ ಕರ್ನಾಟಕ ಮಾರಾಟ ತೆರಿಗೆ ನೋಂದಾಯಿತ 2 ನೇ ದರ್ಜೆ ಗುತ್ತಿಗೆದಾರರು ಮತ್ತು ಅಧಿಕೃತ ಮಾರಾಟಗಾರರು ಆಗಿರಬೇಕು. ಕರ್ನಾಟಕ ವಿದ್ಯುತ್ ಮಂಡಳಿ ಅನುಮತಿ ಪಡೆದು ನಿರ್ದೇಶನದಂತೆ ಕೆಲಸ ನಿರ್ವಹಿಸುವುದು ಮತ್ತು ವಿದ್ಯುತ್ ರಹದಾರಿ ಹೊಂದಿರುವ ನೌಕರರಿಂದ ಕೆಲಸ ನಿರ್ವಹಿಸತಕ್ಕದ್ದು.
3) ಪುರಸಭಾ ವ್ಯಾಪ್ತಿಯಲ್ಲಿ ಉರಿಯದ (ನಾದುರಸ್ತಿಯಲ್ಲಿರುವ) ದಾರಿದೀಪವನ್ನು ಗುತ್ತಿಗೆದಾರರೇ ಸ್ವತಃ ಸ್ಥಳಕ್ಕೆ ಹೋಗಿ ಪರಿಶೀಲಿಸಿ ಮತ್ತು ಕಛೇರಿಗೆ ಬಂದಿರುವ ದೂರಿನ ಬಗ್ಗೆ ಪುರಸಭಾ ಕಛೇರಿಯಿಂದ ಮಾಹಿತಿ ಪಡಕೊಂಡು 2 ದಿನಗಳೊಳಗೆ ದುರಸ್ತಿ ಕೆಲಸವನ್ನು ತೃಪ್ತಿಕರವಾಗಿ

ನಿರ್ವಹಿಸತಕ್ಕದ್ದು. ದುರಸ್ತಿಗೊಳಿಸುವರೇ ಬೇಕಾಗುವ ವಿದ್ಯುತ್ ಬಿಡಿಭಾಗಗಳನ್ನು ಕಿರಿಯ ಅಭಿಯಂತರರ ಸಮಕ್ಷಮದಲ್ಲಿ ಅಳವಡಿಸಿ, ನಿರುಪಯುಕ್ತ ಸಾಮಾಗ್ರಿಗಳನ್ನು ವರದಿಗಳೊಂದಿಗೆ ಪುರಸಭಾ ದಾಸ್ತಾನಿಗೆ ಹಿಂದಿರುಗಿಸುವುದು.

4) ಸೂಚಿಸಿದ ಕೊಟೇಶನ್ ದರದಲ್ಲಿ ಸಾಗಣೆ, ಮಾರಾಟ ದರ ಇತ್ಯಾದಿ ಎಲ್ಲಾ ದರ ಸೇರಿಸಿ ನಮೂದಿಸುವುದು. ಕಾಲ ಕಾಲಕ್ಕೆ ವ್ಯತ್ಯಾಸವಾಗುವ ಮಾರುಕಟ್ಟೆ ದರಕ್ಕೆ ಕೊಟೇಶನ್‌ದಾರರೇ ಜವಾಬ್ದಾರರು, ಮಂಜೂರಾದ ಕೊಟೇಶನ್‌ದಾರರು ದಿ: 31/03/2010 ರ ವರೆಗೆ ಕಛೇರಿ ಆದೇಶದಂತೆ ತೃಪ್ತಿಕರವಾಗಿ ಕೆಲಸ ನಿರ್ವಹಿಸುವುದಾಗಿ ಪುರಸಭಾ ಕಛೇರಿಗೆ ಮುಚ್ಚಳಿಕೆ ಪತ್ರವನ್ನು ನೀಡುವುದು.

ಸಹಿ/–
(ರಾಜೇಶ್ ಬನ್ನೂರು)
ಅಧ್ಯಕ್ಷರು
ಪುರಸಭೆ ಪುತ್ತೂರು

ಸಹಿ/–
(ಎ.ಎಸ್.ರಾಣೆ)
ಮುಖ್ಯಾಧಿಕಾರಿ,
ಪುರಸಭೆ ಪುತ್ತೂರು